**ಸಿ.ಸಿ. ನಂಬರಃ 2049/2025**

**ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 08-01-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**(ಸಾಕ್ಷಿಯ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲಾಗಿರುತ್ತದೆ)**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಟಿ.ಎನ್. ವಕೀಲರಿಂದ,**

4. ನಾನು ಸುಮಾರು ಫಿರ್ಯಾದಿ ಸೊಸೈಟಿಯಲ್ಲಿ 6 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಫಿರ್ಯಾದಿ ಸೊಸೈಟಿಯು ಸಹಕಾರಿ ಸಂಘಗಳ ಅಧಿನಿಯಮದಡಿ ನೊಂದಾವಣೆ ಆಗಿರುತ್ತದೆ. ಆ ಬಗ್ಗೆ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಆ ರೀತಿ ದಾಖಲಾತಿ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಫಿರ್ಯಾದಿ ಸೊಸೈಟಿಯು ನಿರ್ದೇಶಕರ ಮಂಡಳಿಯ ನಿರ್ದೇಶನದಂತೆ ಕೆಲಸ ನಿರ್ವಹಿಸುತ್ತದೆ ಎಂದರೆ ಹೌದು. ಅದೇ ರೀತಿ ನನಗೆ ಫಿರ್ಯಾದಿ ಸೊಸೈಟಿಯವರ ಪರವಾಗಿ ಪ್ರಕರಣ ದಾಖಲಿಸಲು, ಪ್ರಕರಣವನ್ನು ವಾಪಸ್ಸು ಪಡೆಯಲು, ಹಾಗೆ ನನಗೆ ಸಾಕ್ಷಿ ಹೇಳಲು ನಿರ್ದೇಶಕರ ಮಂಡಳಿಯ ಒಪ್ಪಿಗೆ ಬೇಕು ಎಂದರೆ ಹೌದು. ಆ ರೀತಿ ಒಪ್ಪಿಗೆಯು ಠರಾವು ಪುಸ್ತಕದಲ್ಲಿ ಠರಾವಿನ ಮೂಲಕ ನಮೂದಾಗಿರುತ್ತದೆ ಎಂದರೆ ಹೌದು. ಸದ್ರಿ ಮೂಲ ಠರಾವಿನ ಯಥಾಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ.

5. ಈ ದೂರಿನಲ್ಲಿ ಹೇಳಿದ ಸಾಲಕ್ಕೆ ಸಂಬಂಧಿಸಿದಂತೆ, ಸಾಲದ ಅರ್ಜಿಯನ್ನು ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಇಟ್ಟಿರುತ್ತೇವೆ. ಆ ರೀತಿ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಇಟ್ಟ ಬಗ್ಗೆ ಠರಾವಿನಲ್ಲಿ ನಮೂದಾಗಿರುತ್ತದೆ. ಸದ್ರಿ ಠರಾವಿನ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ.

6. ಆರೋಪಿಗೆ ವ್ಯಾಪಾರ ಸಾಲ ನೀಡಿರುತ್ತೇವೆ. ಯಾವ ವ್ಯಾಪಾರ ಎಂದು ನೋಟೀಸಿನಲ್ಲಿ ಮತ್ತು ದೂರಿನಲ್ಲಿ ಹೇಳಿರುವುದಿಲ್ಲ. ಸದ್ರಿ ಸಾಲ 36 ಕಂತುಗಳ ಸಾಲ ಆಗಿತ್ತು. ಆರೋಪಿಯು 8 ಕಂತುಗಳನ್ನು ಪಾವತಿಸಿರುತ್ತಾರೆ. ಆರೋಪಿಗೆ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಸಾಲ ನೀಡಿರುತ್ತೇವೆ. ಸದ್ರಿ ಸಾಲದ ಹಣದಲ್ಲಿ ಹನ್ನೆರಡು ಸಾವಿರ ರೂಪಾಯಿ ನಿಶ್ಚಿತ ಠೇವಣಿ ಮೊತ್ತ ಮತ್ತು ಆರು ಸಾವಿರ ರೂಪಾಯಿ ಷೇರು ಮೊತ್ತ ಪಡೆದಿರುತ್ತೇವೆ. ನಿಶ್ಚಿತ ಠೇವಣಿ ಮೊತ್ತವನ್ನು ಸಾಲದ ಖಾತೆಗೆ ಜಮಾ ಮಾಡಿರುತ್ತೇವೆ. ಷೇರು ಮೊತ್ತ ಈಗಲೂ ಚಾಲ್ತಿಯಲ್ಲಿರುತ್ತದೆ. ನಿಶ್ಚಿತ ಠೇವಣಿ ಮೊತ್ತವನ್ನು ತೆಗೆಯಲು ಆರೋಪಿ ಸಹಿ ಮಾಡಿ ಕೊಟ್ಟಿರುತ್ತಾರೆ. ನಿಶ್ಚಿತ ಠೇವಣಿ ಮೊತ್ತವನ್ನು ದಿನಾಂಕಃ 30-05-2025 ರಂದು ಸಾಲದ ಖಾತೆಗೆ ಜಮಾ ಮಾಡಿರುತ್ತೇವೆ. ಸಾಮಾನ್ಯವಾಗಿ ನಿಶ್ಚಿತ ಠೇವಣಿ ಮೊತ್ತಕ್ಕೆ ವಾರ್ಷಿಕ 8% ಬಡ್ಡಿ ಆಕರಣೆ ಮಾಡುತ್ತೇವೆ. ಆ ರೀತಿ ನಿಶ್ಚಿತ ಠೇವಣಿ ಮೊತ್ತಕ್ಕೆ ದಿನಾಂಕಃ 30-05-2025 ರವರೆಗೆ ಅಂದಾಜು ಮೂರರಿಂದ ಮೂರುವರೆ ಸಾವಿರ ರೂಪಾಯಿ ಬಡ್ಡಿ ಜಮಾ ಆಗಿರುತ್ತದೆ. ಆರೋಪಿಯ ನಿಶ್ಚಿತ ಠೇವಣಿ ಮೊತ್ತವನ್ನು ಜಮಾ ಮಾಡಿದ ಬಗ್ಗೆ ಆರೋಪಿಗೆ ತಿಳಿಸಿ ಮಾಡಿರುತ್ತೇವೆ. ನಿಶ್ಚಿತ ಠೇವಣಿ ಮೊತ್ತವನ್ನು ಜಮಾ ಮಾಡಿದ ಬಗ್ಗೆ ಸಾಲದ ಖಾತೆಯ ಸ್ಟೇಟ್ ಮೆಂಟ್ ನಲ್ಲಿ ನಮೂದು ಇರುತ್ತದೆ. ಆ ರೀತಿ ನಿಪಿ-9 ರಲ್ಲಿ ಹದಿನೈದು ಸಾವಿರ ರೂಪಾಯಿ ಜಮಾ

ಆಗಿರುವುದು ಕಂಡುಬರುತ್ತದೆ. ಆ ರೀತಿ ಹಣ ಜಮಾ ಮಾಡಿದ ವಿಷಯವನ್ನು ನೋಟೀಸು ಮತ್ತು ದೂರಿನಲ್ಲಿ ಹೇಳಿರುವುದಿಲ್ಲ. ಸಾಲ ಕಟ್ ಬಾಕಿ ಆದ ಬಗ್ಗೆ ಆರೋಪಿಗೆ ನೋಟೀಸು ನೀಡಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**